# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

**ಪ್ರಾದೇಶಿಕ ಕಛೇರಿ, ಕುಸನೂರ ರಸ್ತೆ ಕಲಬುರಗಿ – 585105**

**ಡಾ. ಬಸವರಾಜ ಗಾದ್ಗೆ**
ಪ್ರಭಾರಿ ಪ್ರಾದೇಶಿಕ ನಿರ್ದೇಶಕರು & ಸಂಯೋಜನಾಧಿಕಾರಿಗಳು

☎ : 08472-256155/245150
🖷 : 08472-256156/256110/245152

ಸಂ:ವಿತಾವಿ/ಕಲ/ಪ್ರಾ/ಎ4/ಇ ಎಸ್ ಟಿ/ 2018-19/ 565 . ದಿನಾಂಕ: 04-08-2018

**-ಅಧಿಸೂಚನೆ-**

ವಿಷಯ: ೨೦೧೮-೧೯ ನೇ ಶೈಕ್ಷಣಿಕ ಸಾಲಿನಲ್ಲಿ ಕಲಬುರಗಿಯ ಪ್ರಾದೇಶಿಕ ಕಛೇರಿಯಲ್ಲಿ ಅತಿಥಿ ಉಪನ್ಯಾಸಕರುಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಸಲು ಅಧಿಸೂಚನೆ ಬಗ್ಗೆ.

ನಮ್ಮ ವಿ.ತಾ.ವಿ. ಸ್ನಾತಕೋತ್ತರ ಕಛೇರಿಯಲ್ಲಿ ಈ ಕೆಳಕಂಡ ವಿಭಾಗಗಳಲ್ಲಿ ೨೦೧೮-೧೯ ನೇ ಶೈಕ್ಷಣಿಕ ಸಾಲಿನಲ್ಲಿ ಲಭ್ಯವಿರುವ ಹೆಚ್ಚುವರಿ ಭೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರುಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ನೇಮಕಾತಿಯಡಿ ನೇಮಕವಾಗುವ ಅತಿಥಿ ಉಪನ್ಯಾಸಕರಿಗೆ ಮಾಸಿಕ ಸಂಚಿತ ವೇತನ ರೂಪಾಯಿ. ೨೫,೦೦೦=೦೦ (ರೂ. ಇಪ್ಪತ್ತೈದು ಸಾವಿರ) ಗಳನ್ನು ನಿಗದಿಪಡಿಸಲಾಗಿದೆ. ಅಭ್ಯರ್ಥಿಗಳು ಪ್ರಾದೇಶಿಕ ಕಛೇರಿಯ e-mail (vtuklb.recruitment@gmail.com)ಗೆ ದಿನಾಂಕ: ೦೬-೦೮-೨೦೧೮ರ ಬೆಳಗ್ಗೆ ೧೦.೦೦ ಗಂಟೆಯಿಂದ ದಿನಾಂಕ : ೨೦-೦೮-೨೦೧೮ರ ಸಂಜೆ ೫.೦೦ ಗಂಟೆಯವರೆಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು. ಅರ್ಜಿಯನ್ನು e-mail ಮೂಲಕ ಸಲ್ಲಿಸಿದ ನಂತರ ಅದನ್ನು ಪ್ರಿಂಟ್ ತೆಗೆದು ಅರ್ಜಿಯ ಜೊತೆ ಅರ್ಜಿ ಶುಲ್ಕಕ್ಕೆ ಸಂಬಂಧಿಸಿದ online payment receipt, ಶೈಕ್ಷಣಿಕ ದಾಖಲೆಗಳಾದ ಅಂಕ ಪಟ್ಟಿಗಳು, ಪ್ರಮಾಣ ಪತ್ರಗಳು ಮತ್ತು ಮೀಸಲಾತಿಗೆ ಸಂಬಂಧಪಟ್ಟ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಲಗತ್ತಿಸಿ, ಇವುಗಳನ್ನು ಪ್ರಭಾರಿ ಪ್ರಾದೇಶಿಕ ನಿರ್ದೇಶಕರು & ಸಂಯೋಜನಾಧಿಕಾರಿಗಳು, ಪ್ರಾದೇಶಿಕ ಕಛೇರಿ, ಕುಸನೂರ ರಸ್ತೆ, ಕಲಬುರಗಿ-೫೮೫ ೧೦೫-ಇವರಿಗೆ ದಿನಾಂಕ ೨೦-೦೮-೨೦೧೮ರ ಸಂಜೆ ೦೫.೦೦ ಗಂಟೆಯೊಳಗಾಗಿ ತಲುಪುವಂತೆ ಅಂಚೆಯ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ.

**ಅರ್ಜಿ ಶುಲ್ಕ:- ಈ ಕೆಳಗೆ ತಿಳಿಸಿರುವ ಪ್ರಕಾರ ಅರ್ಜಿ ಶುಲ್ಕವನ್ನು ಸಲ್ಲಿಸಬೇಕು.**

| | |
|---|---|
| ಸಾಮಾನ್ಯ ವರ್ಗ, ಪ್ರವರ್ಗ ೨(ಎ), ೨(ಬಿ), ೩(ಬಿ), ಗೆ ಸೇರಿದ ಅಭ್ಯರ್ಥಿಗಳಿಗೆ | ರೂ. ೫೦೦/- |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ – ೧ ಕ್ಕೆ ಸೇರಿದ ಅಭ್ಯರ್ಥಿಗಳಿಗೆ | ರೂ. ೨೫೦/- |

ಅರ್ಜಿ ಶುಲ್ಕವನ್ನು (The Finance Officer, VTU, Belagavi) ಹಣಕಾಸು ಅಧಿಕಾರಿಗಳು, ವಿತಾವಿ, ಬೆಳಗಾವಿಯವರ ಖಾತೆಗೆ ಆನ್‌ಲೈನ್‌ನಲ್ಲಿ (online payment) ಪಾವತಿಸಿ, ಪಾವತಿಸಿರುವ ವಿವರಗಳನ್ನು (UTR No) ಅರ್ಜಿ ಜೊತೆ ಲಗತ್ತಿಸತಕ್ಕದ್ದು. ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ ಮುಗಿದ ನಂತರ ಸಂದರ್ಶನ ನಡೆಸುವ ಮೂಲಕ ಅತಿಥಿ ಉಪನ್ಯಾಸಕರುಗಳನ್ನು ಆಯ್ಕೆ ಮಾಡಲಾಗುವುದು.

ಸಂದರ್ಶನ ನಿಗದಿ ಪಡಿಸಿದ ದಿನಾಂಕಗಳನ್ನು ಪ್ರತ್ಯೇಕವಾಗಿ ಅಭ್ಯರ್ಥಿಗಳಿಗೆ ತಿಳಿಸಲಾಗುವುದಿಲ್ಲ. ಆದರೆ ಸಂದರ್ಶನ ನಡೆಯುವ ದಿನಾಂಕ ಮತ್ತು ವೇಳೆ, ಸಂದರ್ಶನ ನಡೆಯುವ ಸ್ಥಳದ ಮಾಹಿತಿಯ ವಿವರಗಳನ್ನು ಕಛೇರಿಯ e-mail ಮುಖಾಂತರ ತಿಳಿಸಲಾಗುವುದು. ಅಭ್ಯರ್ಥಿಗಳು e-mail ಸಂದರ್ಶನದ ದಿನಾಂಕವನ್ನು ಖಚಿತ ಪಡಿಸಿಕೊಂಡು ಸಂದರ್ಶನಕ್ಕೆ ಮೂಲ ದಾಖಲಾತಿಗಳೊಂದಿಗೆ ಹಾಜರಾಗಲು ಈ ಮೂಲಕ ತಿಳಿಯಪಡಿಸಲಾಗಿದೆ.

| ಕ್ರಮಸಂ | ವಿಭಾಗ | ಹುದ್ದೆಗಳ ಸಂಖ್ಯೆ | ನಿಗಧಿ-ಪಡಿಸಿರುವ ವಿದ್ಯಾರ್ಹತೆ (Qualification ) |
|---|---|---|---|
| ೧ | Mechanical | ೦೧<br>೦೧ | ೧.BE/B. Tech. & ME/M.Tech. in relevant branch with 1st class or equivalent in BE/B.Tech. or ME/M.Tech.<br>೨. ಪಿ ಹೆಚ್.ಡಿ,./ನೆಟ್/ ಸೆಟ್/ ಗೇಟ್/ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಪ್ರಮಾಣ ಪತ್ರ ಲಗತ್ತಿಸಬೇಕು<br>೩. ಈ ಹಿಂದೆ ಬೋಧನಾ ಅನುಭವವಿರುವವರು ಅನುಭವ ಪ್ರಮಾಣ ಪತ್ರ ಲಗತ್ತಿಸಬೇಕು<br>**3. Machine Design.**<br>**4. Thermal Power Engineering.** |
| ೨ | E & CE | ೦೧ | ೧.BE/B.Tech. & ME/M.Tech in relevant branch with 1st class or equivalent in BE/B.Tech. or ME/M. Tech.<br>೨. ಪಿ ಹೆಚ್.ಡಿ,./ನೆಟ್ / ಸೆಟ್ /ಗೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಪ್ರಮಾಣ ಪತ್ರ ಲಗತ್ತಿಸಬೇಕು<br>೩. ಈ ಹಿಂದೆ ಬೋಧನಾ ಅನುಭವವಿರುವವರು ಅನುಭವ ಪ್ರಮಾಣ ಪತ್ರ ಲಗತ್ತಿಸಬೇಕು<br>**2. VLSI Design and Embedded Systems** |
| ೩ | MCA | ೦೨ | ೧.BE/B. Tech. & ME/M.Tech. in relevant branch with 1st class or equivalent in BE/B.Tech. or ME/M.Tech.<br>೨. ಪಿ ಹೆಚ್.ಡಿ,./ನೆಟ್/ಸೆಟ್/ಗೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಪ್ರಮಾಣ ಪತ್ರ ಲಗತ್ತಿಸಬೇಕು<br>೩. ಈ ಹಿಂದೆ ಬೋಧನಾ ಅನುಭವವಿರುವವರು ಅನುಭವ ಪ್ರಮಾಣ ಪತ್ರ ಲಗತ್ತಿಸಬೇಕು<br>**2. MCA / M. Tech. in Computer Science and Engg .** |
| ೪ | Civil | ೦೧ | ೧.BE/B.Tech. & ME/M.Tech. in relevant branch with 1st class or equivalent in BE/B.Tech or ME/M.Tech.<br>೨. ಪಿ ಹೆಚ್.ಡಿ,./ನೆಟ್/ ಸೆಟ್/ ಗೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಪ್ರಮಾಣ ಪತ್ರ ಲಗತ್ತಿಸಬೇಕು<br>೩. ಈ ಹಿಂದೆ ಬೋಧನಾ ಅನುಭವವಿರುವವರು ಅನುಭವ ಪ್ರಮಾಣ ಪತ್ರ ಲಗತ್ತಿಸಬೇಕು<br>**2. M. Tech. in Construction Technology .** |
| ೫ | Civil | ೦೨ | ೧.BE/B.Tech . & ME/M.Tech. in relevant branch with 1st class or equivalent in BE/B.Tech. or ME/M.Tech.<br>೨. ಪಿ ಹೆಚ್.ಡಿ,./ನೆಟ್/ಸೆಟ್/ ಗೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಪ್ರಮಾಣ ಪತ್ರ ಲಗತ್ತಿಸಬೇಕು<br>೩. ಈ ಹಿಂದೆ ಬೋಧನಾ ಅನುಭವವಿರುವವರು ಅನುಭವ ಪ್ರಮಾಣ ಪತ್ರ ಲಗತ್ತಿಸಬೇಕು<br>**2. M. Tech . in Highway Technology** |
| ೬ | E & CE | ೦೨ | ೧.BE/B.Tech. & ME/M.Tech. in relevant branch with 1st class or equivalent in BE/B.Tech. or ME/M.Tech.<br>೨. ಪಿ ಹೆಚ್.ಡಿ../ನೆಟ್/ಸೆಟ್/ ಗೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಪ್ರಮಾಣ ಪತ್ರ ಲಗತ್ತಿಸಬೇಕು<br>೩. ಈ ಹಿಂದೆ ಬೋಧನಾ ಅನುಭವವಿರುವವರು ಅನುಭವ ಪ್ರಮಾಣ ಪತ್ರ ಲಗತ್ತಿಸಬೇಕು<br>**2. M. Tech. in Digital Electronics and Communication System** |

**ವಿಶೇಷ ಸೂಚನೆಗಳು :-**

೧) ಅಭ್ಯರ್ಥಿಗಳು ಅರ್ಜಿಯನ್ನು e-mail ಮೂಲಕ ಸಲ್ಲಿಸುವ ಮೊದಲು ಕೊಟ್ಟಿರುವ ಎಲ್ಲಾ ಸೂಚನೆಗಳು ಗಮನವಿಟ್ಟು ಓದಿಕೊಳ್ಳಬೇಕು ಮತ್ತು ತಪ್ಪಾಗದಂತೆ ನೋಡಿಕೊಳ್ಳುವುದು. ಸರಿಯಾದ ಮಾಹಿತಿ ನೀಡದೇ ಇರುವ ಅಪೂರ್ಣ ಮಾಹಿತಿಯುಳ್ಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

೨) ಅಭ್ಯರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಸ್ಕ್ಯಾನ್ ಮಾಡಿ ಕಳುಹಿಸಲು ಈ ಕೆಳಕಂಡ ನಿರ್ದೇಶಗಳನ್ನು ಪಾಲಿಸತಕ್ಕದು.

ಅ) ಬಣ್ಣದ ಭಾವಚಿತ್ರವು ಇತ್ತೀಚಿನದಾಗಿದ್ದು, ಅಳತೆಯಲ್ಲಿ 5 cm ಉದ್ದ x 3.6 cm ಅಗಲವುಳ್ಳದ್ದಾಗಿರಬೇಕು ಮತ್ತು 50kb ಅಳತೆಯದ್ದಾಗಿರಬೇಕು ಹಾಗೂ ಅದು jpg ನಮೂನೆಯಲ್ಲಿರಬೇಕು ಭಾವಚಿತ್ರದ ಹಿಂಬದಿಯ ಬಿಳಿಬಣ್ಣದ ಮೇಲೆ ಸಹಿ ಮಾಡಬಾರದು.

೩) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೇ, ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿ ಹಿಂತಿರುಗಿಸಲಾಗುವುದಿಲ್ಲ.

೪) ಕಚೇರಿಯ ಅಧಿಕೃತ e-mail ಮುಖಾಂತರ ದಿನಾಂಕ ೨೦-೦೮-೨೦೧೮ ರ ಸಂಜೆ ೫.೦೦ ಗಂಟೆಯವರೆಗೂ e-mail ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

೫) ಮೇಲ್ಕಂಡ ದಾಖಲೆಗಳು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಮೊದಲು ಪಡೆದ ದಾಖಲೆಗಳಾಗಿರಬೇಕು ಹಾಗೂ ಸದರಿ ದಾಖಲೆಗಳ ಮೂಲ ದಾಖಲೆಗಳನ್ನು ಪರಿಶೀಲನೆ ಸಮಯದಲ್ಲಿ ಹಾಜರುಪಡಿಸಬೇಕು. ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.

೬) ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವಾಗ ಯಾವುದೇ ಸುಳ್ಳು / ತಪ್ಪು ಮಾಹಿತಿಯನ್ನು ನೀಡಬಾರದು ಹಾಗೇ ನೀಡಿ ತದನಂತರ ನೇಮಕಾತಿ ಸಮಿತಿಗೆ ಅದು ಪತ್ತೆಯಾದಲ್ಲಿ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದು ಪಡಿಸಲಾಗುವುದು.

೭) ಅರ್ಜಿಯನ್ನು ಸ್ವೀಕರಿಸಲು ನಿಗಧಿಸಡಿಸಿರುವ ಕೊನೆಯ ದಿನಾಂಕಕ್ಕೆ ಅಂದರೆ ದಿನಾಂಕ ೨೦-೦೮-೨೦೧೮ಕ್ಕೆ ಮೊದಲು ಅಭ್ಯರ್ಥಿಗಳು ಹುದ್ದೆಗೆ ನಿಗಧಿಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿರಬೇಕು.

೮) ಅಭ್ಯರ್ಥಿಗಳು ಅರ್ಜಿಯಲ್ಲಿ ತಪ್ಪು ಅಥವಾ ಸುಳ್ಳು ಮಾಹಿತಿ ನೀಡಿದ್ದಲ್ಲಿ ಅದಕ್ಕೆ ಅಭ್ಯರ್ಥಿಗಳೇ ಜವಾಬ್ದಾರರಾಗಿರುತ್ತಾರೆ. ಅರ್ಜಿಯಲ್ಲಿನ ವಿವರಗಳು ಸರಿಯಾಗಿವೆಯೇ ಎಂದು ಮನಗಂಡು ಆ ನಂತರ e-mail ಮುಖಾಂತರ ಅರ್ಜಿಯನ್ನು ಸಲ್ಲಿಸುವುದು ಸೂಕ್ತ.

೯) ಅಭ್ಯರ್ಥಿಗಳು ಅರ್ಜಿಯನ್ನು ಸಮರ್ಪಕವಾಗಿ ತುಂಬದೇ ಸದರಿ ಅರ್ಜಿ ತಿರಸ್ಕೃತವಾದಲ್ಲಿ ತತ್ಸಂಬಂಧ ಯಾವುದೇ ರೀತಿಯ ಪತ್ರ ವ್ಯವಹಾರಕ್ಕೆ ಅವಕಾಶವಿರುವದಿಲ್ಲ.

೧೦) ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ e-mail ಮೂಲಕ ಅರ್ಜಿ ಸಲ್ಲಿಸುವಾಗ ಪ್ರತ್ಯೇಕವಾಗಿ ಆಯಾ ವಿಭಾಗಗಳ ಹೆಸರುಗಳನ್ನು ನಮೂದಿಸಿ ಪ್ರತ್ಯೇಕವಾಗಿ e-mail ಮೂಲಕ ಅರ್ಜಿಯನ್ನು ಸಲ್ಲಿಸಬೇಕು

೧೧) ಅಭ್ಯರ್ಥಿಗಳು ನಿಗಧಿ ಪಡಿಸಿದ ಅರ್ಜಿಯಲ್ಲಿಯೇ ಎಲ್ಲಾ ಅಂಕಣಗಳನ್ನು ಸ್ಪಷ್ಟವಾಗಿ ಭರ್ತಿ ಮಾಡತಕ್ಕದ್ದು. ಇತರೆ ಯಾವುದೇ ನಮೂನೆಗಳಲ್ಲಿ ಸಲ್ಲಿಸುವ, ಶುಲ್ಕ ಪಾವತಿಸದೇ ಸಲ್ಲಿಸಲ್ಪಡುವ ಅಪೂರ್ಣವಾಗಿರುವ, ಸಹಿ ಮಾಡದ ಹಾಗೂ ಭಾವಚಿತ್ರ ಇಲ್ಲದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

೧೨) i) ಮೀಸಲಾತಿ ಕೋರುವ ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳನ್ನು e-mail ನಲ್ಲಿ ಸಲ್ಲಿಸಿ ಅರ್ಜಿಯ ಪ್ರಿಂಟ್ ತೆಗೆದು ಅರ್ಜಿಯ ಜೊತೆ ಕೊನೆಯ ದಿನಾಂಕದೊಳಗಾಗಿ ಸಲ್ಲಿಸತಕ್ಕದ್ದು.

ಎ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದ ನಮೂನೆ-ಡಿ ಪ್ರಮಾಣ ಪತ್ರ.

ಬಿ) ಪ್ರವರ್ಗ -೧ ವರ್ಗದ ಅಭ್ಯರ್ಥಿಗಳಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದ ನಮೂನೆ-ಇ ಪ್ರಮಾಣ ಪತ್ರ.

ಸಿ) ಪ್ರವರ್ಗ ೨(ಎ), ೨(ಬಿ), ೩(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ತಹಶೀಲ್ದಾರ್ ಪಡೆದ ನಮೂನೆ-ಎಫ್ ಪ್ರಮಾಣ ಪತ್ರ.

**ಸೂಚನೆ:**-ನಮೂನೆ ಎಫ್ ಪ್ರಮಾಣ ಪತ್ರವು ಅರ್ಜಿ ಸಲ್ಲಿಸಲು ನಿಗಧಿ ಪಡಿಸಿ ಕೊನೆಯ ದಿನಾಂಕ ೨೦-೦೮-೨೦೧೮ಕ್ಕೆ ಐದು ವರ್ಷ ಹಳೆಯದಾಗಿರಬಾರದು.

ii) ಹೈದಾರಾಬಾದ್ ಕರ್ನಾಟಕ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರ ಇದ್ದಲ್ಲಿ ಅದರ ಜೆರಾಕ್ಸ್ ಪ್ರತಿಯನ್ನು ಭರ್ತಿ ಮಾಡಿದ ಅರ್ಜಿಯ ಜೊತೆ ಲಗತ್ತಿಸಬೇಕು.

೧೩) ಅಭ್ಯರ್ಥಿಯು ಅರ್ಜಿಯಲ್ಲಿ ಭರ್ತಿ ಮಾಡಿದ ಮಾಹಿತಿಯನ್ನು ಅಂತಿಮವಾಗಿರುತ್ತದೆ. ಆದ್ದರಿಂದ ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವಾಗ ಅರ್ಜಿಯ ಎಲ್ಲಾ ಕಾಲಂಗಳನ್ನು ಭರ್ತಿ ಮಾಡತಕ್ಕದ್ದು. ಭರ್ತಿ ಮಾಡಿ ಸಲ್ಲಿಸಿದಂತಹ ಅರ್ಜಿಯಲ್ಲಿನ ಅಂಶ/ಮಾಹಿತಿಯನ್ನು ಯಾವುದೇ ಸಂಧರ್ಭದಲ್ಲಿ ಬದಲಾವಣೆ ಮಾಡಲಾಗುವುದಿಲ್ಲ.

೧೪) ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ವಿಳಾಸ ಬದಲಾಣೆಯಾಗಿದ್ದಲ್ಲಿ, ತಕ್ಷಣ ಅಭ್ಯರ್ಥಿಗಳು ಲಿಖಿತ ಮೂಲಕ ಈ ಕೆಳಗೆ ಸಹಿ ಮಾಡಿರುವವರ ಗಮನಕ್ಕೆ ತರತಕ್ಕದ್ದು ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ಪ್ರಯುತ್ನಿಸಲಾಗುವುದು, ಆದಾಗ್ಯೂ ಈ ವಿಚಾರದಲ್ಲಿ ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರಿಕೆ ವಹಿಸತಕ್ಕದ್ದು.

೧೫) e-mail ಮೂಲಕ ಅರ್ಜಿ ಸಲ್ಲಿಸಿ ಅದರ ಪ್ರಿಂಟ್‌ನ್ನು ಅರ್ಜಿಯ ಜೊತೆ ಅಗತ್ಯ ದಾಖಲೆಗಳನ್ನು ಸಲ್ಲಿಸಿದ ಅರ್ಜಿಗಳನ್ನು ಹೊರತು ಪಡಿಸಿ, e-mailನಲ್ಲಿ ಅರ್ಜಿ ಸಲ್ಲಿಸದೇ ನೇರವಾಗಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು

ಪ್ರಭಾರಿ ಪ್ರಾದೇಶಿಕ ನಿರ್ದೇಶಕರು & ಸಂಯೋಜನಾಧಿಕಾರಿಗಳು
ವಿತಾವಿ ಪ್ರಾದೇಶಿಕ ಕಛೇರಿ ಕಲಬುರಗಿ.

ಗೆ,

೧) ಮಾನ್ಯ ಕುಲಸಚಿವರು, **ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ**, ಜ್ಞಾನಸಂಗಮ ಬೆಳಗಾವಿ. ಇವರಿಗೆ ಮೇಲ್ಕಂಡ ಅಧಿಸೂಚನೆಯನ್ನು ವಿತಾವಿ ವೆಬ್ ಸೈಟ್ www.vtu.ac.in ನಲ್ಲಿ ಪ್ರಕಟಿಸಲು ಸಂಬಂಧಪಟ್ಟವರಿಗೆ ನಿರ್ದೇಶ: ನೀಡಲು ಕೋರಲಾಗಿದೆ.

೨) ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, **ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ**, ಜ್ಞಾನಸಂಗಮ ಬೆಳಗಾವಿ. ಇವರ ಗಮನಕ್ಕೆ ಹಾಗೂ ಸೂಕ್ತ ಕ್ರಮಕ್ಕಾಗಿ.